<u>ಪ್ರಧಾನ ಸಿವಿಲ್ ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ಕಡೂರು.</u>

**<u>C.C.No.732/2024. P.W.-1.</u>**

ದಿನಾಂಕ:**22.07.2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

<u>ಮುಂದುವರೆದ ಪಾಟೀ ಸವಾಲು:</u> ಪ್ರತಿವಾದಿಯರ ಪರ ಶ್ರೀ ಎಂ ಎನ್ ವಕೀಲರಿಂದ:-

ನಾನು ದೂರಿನಲ್ಲಿ ನಮೂದಿಸಿರುವ ವಿಳಾಸದಲ್ಲಿ 2 ವರ್ಷ ವಾಸವಿದ್ದೆ, ಪ್ರಸ್ತುತ ಬೀರೂರಿನಲ್ಲಿ ವಾಸವಿದ್ದೇನೆ. ನಾನು ಬೀರೂರಿನಲ್ಲಿ ವಾಸವಿರುವ ಬಗ್ಗೆ ಬಾಡಿಗೆ ಕರಾರು ಇದೆ, ಆದರೆ ದೂರಿನಲ್ಲಿನ ವಿಳಾಸದಲ್ಲಿ ವಾಸಿಸುತ್ತಿದ್ದ ಬಗ್ಗೆ ಸದರಿಯವರು ಸಂಬಂಧಿಕರಾಗಿದ್ದರಿಂದ ಯಾವುದೇ ದಾಖಲೆ ಇಲ್ಲ. ಬೀರೂರಿನಲ್ಲಿ ಸೀತಮ್ಮ ರವರ ಮನೆಯಲ್ಲಿ ನನ್ನ ತಾಯಿಯ ಹೆಸರಿನಲ್ಲಿ ಬಾಡಿಗೆ ಪತ್ರವಾಗಿದೆ. ನಾನು ಮತ್ತು ನನ್ನ ತಾಯಿ ಒಟ್ಟಿಗೆ ವಾಸವಿದ್ದೇವೆ.

ಸದರಿ ದಾಖಲೆ ಹಾಜರುಪಡಿಸಲು ತೊಂದರೆ ಇಲ್ಲ ಎಂದು ಪ್ರಶ್ನಿಸಿದ್ದು ಆದರೆ NI Act ಪ್ರಕರಣಗಳಲ್ಲಿ ದೂರುದಾರರ ವಿಳಾಸವು ಅಪ್ರಸ್ತುತವಾದ್ದರಿಂದ ಸದರಿ ಪ್ರಶ್ನೆ ತಿರಸ್ಕರಿಸಲಾಗಿದೆ.

ನಾನು ಮೊದಲಿಗೆ 2021 ರಲ್ಲಿ ಉಮಾದೇವಿರವರ ವಿರುದ್ಧ ಕೇಸು ದಾಖಲಿಸಿದ್ದೆ, ದಿನಾಂಕ ನೆನಪಿಲ್ಲ. ನಾನು ಸದರಿ ಪ್ರಕರಣದ ದಾಖಲು ಮಾಡುವ ಅವಧಿಯಲ್ಲಿ ಕೊಪ್ಪಳದ ಕರಟಗಿಯಲ್ಲಿ ವಾಸವಿದ್ದೆ, ಆದ್ದರಿಂದ ಸದರಿ ವಿಳಾಸ ನೀಡಿರುತ್ತೇನೆ.

ನೀವು ಇರುವ ಬಾಡಿಗೆ ಮೊತ್ತ ಎಷ್ಟು ಎಂದು ಪ್ರಶ್ನಿಸಿದ್ದು ಸದರಿಯು ಅಪ್ರಸ್ತುತ ಎಂದು ತಿರಸ್ಕರಿಸಲಾಗಿರುತ್ತದೆ.

ನನ್ನ ತಾಯಿ ಗೃಹಿಣಿ. ನಾನು ಉಮಾದೇವಿರವರಿಗೂ ಕೂಡ ರೂ.10 ಲಕ್ಷ ಹಣವನ್ನು ನಗಧು ರೂಪದಲ್ಲಿ ನಾನೇ ನೀಡಿದ್ದೆ, ಸದರಿ ಹಣವನ್ನು ಕರಟಗಿಯಲ್ಲಿ ನೀಡಿರುತ್ತೇನೆ. ಸದರಿ 10 ಲಕ್ಷ ಹಣ ನನಗೆ ಜಮೀನಿನಿಂದ ಬಂದಿದೆ. ನನಗೆ ವೈಯಕ್ತಿಕವಾಗಿ ಆದಾಯ ಇಲ್ಲ ಎಂದು ಈಗಾಗಲೇ ಹೇಳಿರುವುದರಿಂದ ಸದರಿ ಹಣ ಹೇಗೆ ಬಂತು ಎಂದು ಪ್ರಶ್ನಿಸಿದ್ದು ಸಾಕ್ಷಿಯು ಒಟ್ಟು ಕುಟುಂಬದ ಆದಾಯದಿಂದ ಬಂದಿದೆ ಎನ್ನುತ್ತಾರೆ. ನನ್ನ ಬಳಿ ಸದರಿ 10 ಲಕ್ಷ ಇತ್ತು ಎಂದು ತೋರಿಸಲು ಬ್ಯಾಂಕ್ ಸ್ಟೇಟ್ ಮೆಂಟ್ ಹಾಜರುಪಡಿಸುತ್ತೇನೆ.

ಆರೋಪಿಗೆ ನೀಡಿದ ರೂ.10 ಲಕ್ಷ ನಮ್ಮ ಜಮೀನಿನ ಆದಾಯದಿಂದ ಬಂದಿದೆ. ಆರೋಪಿ 10 ಲಕ್ಷವನ್ನು ಖಾತೆಯ ಮೂಲಕ ವರ್ಗಾಹಿಸಿರುತ್ತೇನೆ. ಆರೋಪಿ ಆರ್ಥಿಕವಾಗಿ

ಚೆನ್ನಾಗಿ ಇದ್ದಾರೆ ಎಂದರೆ  ಸರಿ. ಆರೋಪಿಯು ಬಾರ್ ಆ್ಯಂಡ್ ರೆಸ್ಟೋರಂಟ್ ಮಾಲೀಕರಾಗಿದ್ದಾರೆ ಎಂದರೆ ಸರಿ. ಅಕೌಂಟ್ ಸ್ಟೇಟ್ ಮೆಂಟ್ ನಲ್ಲಿ ಹಣ ಯಾರಿಂದ ಯಾರಿಗೆ ವರ್ಗಾವಣೆಯಾಗಿದೆ ಎಂದು ನಮೂದು ಇದೆ ಎಂದರೆ ಸರಿ. ನಾನು ಹಾಜರುಪಡಿಸಿರುವ ದಾಖಲೆಯಲ್ಲಿ ಕೇವಲ ರೂ.10 ಸಾವಿರ ವರ್ಗಾವಣೆಯಾದ ಬಗ್ಗೆ ನಮಾದಾಗಿದೆ ಎಂದರೆ ಸಾಕ್ಷಿಯು ಕೆಳಗಡೆ 2 ಬಾರಿ ತಲಾ 10 ಸಾವಿರ , ಮತ್ತೊಮ್ಮೆ ರೂ.9,80,000/- ದಂತೆ ಮೂರು ಬಾರಿ ವರ್ಗಾವಣೆ ಮಾಡಿರುತ್ತೇನೆ ಎನ್ನುತ್ತಾರೆ. ಸದರಿ ದಾಖಲೆಯಲ್ಲಿ ಆರೋಪಿಯ ಹೆಸರು ಇಲ್ಲ ಎಂದರೆ ಖಾತೆಯ ಸಂಖ್ಯೆ ಇದೆ ಎನ್ನುತ್ತಾರೆ. ಆರೋಪಿಯ ಖಾತೆಯ ಸಂಖ್ಯೆ ಗೊತ್ತೆ ಎಂದರೆ ಸಾಕ್ಷಿಯು ನಿಪಿ5 ರಲ್ಲಿ ನಮೂದಾಗಿರುತ್ತದೆ ಎನ್ನುತ್ತಾರೆ. ನಾನು ನಿಪಿ 5 ರಲ್ಲಿ ಹಣ ವರ್ಗಾವಣೆಯಾಗಿದೆ ಎಂದು ಹೇಳುವ ಖಾತೆ ಸಂಖ್ಯೆ ಆರೋಪಿಯದ್ದಲ್ಲ ಎಂದರೆ ಸರಿಯಲ್ಲ. ರೂ.9,80,000/- ವರ್ಗಾವಣೆಯದಾಗ ಆರೋಪಿಯ ಹೆಸರು ಬಂದಿರದ ಕಾರಣ ಸದರಿಯು ಅವರ ಖಾತೆ ಸಂಖ್ಯೆ ಅಲ್ಲ ಎಂದರೆ ಸರಿಯಲ್ಲ.

ನಾನು ಆರೋಪಿಯ ಬಾರ್ ಆ್ಯಂಡ್ ರೆಸ್ಟೋರೆಂಟ್ ನಲ್ಲಿ ಒಂದು ಮಳಿಗೆ ಬಾಡಿಗೆ ಪಡೆಯಲು ಉಮಾದೇವಿರವರೊಂದಿಗೆ ಬಂದಿದ್ದೆ ಎಂದರೆ ಸರಿಯಲ್ಲ. ಉಮಾದೇವಿವರೊಂದಿಗೆ ಹೋಗಿ ಮಳಿಗೆಯ ಮುಂಗಡ ಹಣವಾಗಿ ರೂ.10 ಸಾವಿರ ಮಾತ್ರ ಆರೋಪಿಗೆ ಪಾವತಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ರೂ.10 ಸಾವಿರ ಮಾತ್ರ ನಿಪಿ 5 ರಲ್ಲಿ ನಮೂದಾಗಿದೆ ಎಂದರೆ ಸರಿಯಲ್ಲ.

ಆರೋಪಿಯು ಆರ್ಥಿಕವಾಗಿ ನನಗಿಂದ ಚೆನ್ನಾಗಿ ಇರುವುದರಿಂದ ನನ್ನಿಂದ ಸಾಲ ಪಡೆಯುವ ಅವಶ್ಯಕತೆ ಇರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಬಾರ್ ಗೆ ಸ್ಟಾಕ್ ತರಲು ನನ್ನಿಂದ ಸಾಲ ಪಡೆದಿದ್ದರು ಎನ್ನುತ್ತಾರೆ.

ನಾನು ಆರೋಪಿಗೆ ಕಡೂರಿನ ಶಾರದಮ್ಮ ಎನ್ನುವವರ ಮನೆಯಲ್ಲಿ ದಿಃ08.09.2021 ರಂದು ನೀಡಿರುತ್ತೇನೆ. ಸದರಿಯವರು ನನಗೆ ಪರಿಚಯಸ್ಥರು. ಹಣ ಸಾಲ ನೀಡಿದಾಗ ನಾನು ಮತ್ತು ಆರೋಪಿ ಇಬ್ಬರೆ ಇದ್ದೆವು. ಶಾರದಮ್ಮ ರವರ ಮನೆಯವರು ಮನೆಯ ಒಳಗಡೆ ಇದ್ದರು. ಸದರಿ ಸಾಲ ನೀಡಿದ ವಿಚಾರ ಶಾರದಮ್ಮ ರವರಿಗೆ ಗೊತ್ತಿಲ್ಲ ಸಾಕ್ಷಿಯು ಅವರ ಮನೆಯಲ್ಲಿ ಬಾಡಿಗೆಗೆ ಇದ್ದೆವು ಎನ್ನುತ್ತಾರೆ. ಆರೋಪಿಗೆ ಸಾಲ ನೀಡಿದ ವಿಚಾರ ನನ್ನ ತಾಯಿಗೆ ನಾನು ನಂತದಲ್ಲಿ ಹೇಳಿರುತ್ತೇನೆ. ನಾನು ನನ್ನ ದೂರು ಮತ್ತು

ಪ್ರಮಾಣ ಪತ್ರದಲ್ಲಿ ದಿ:08.09.2021 ರಂದು ಶಾರದಮ್ಮ ರವರ ಮನೆಯಲ್ಲಿ ಸಾಲ ನೀಡಿದ್ದೆ ಎಂಬ ವಿಚಾರ ಹೇಳಿಲ್ಲ. ಸಾಕ್ಷಿ ಮುಂದುವರೆದು ಮನೆಯಲ್ಲಿ ಎಂದು ಹೇಳಿರುತ್ತೇನೆ ಎನ್ನುತ್ತಾರೆ.

ಆರೋಪಿಯು ಹಣ ಸಾಲ ಬೇಕು ಎಂದು ಕೇಳಿದ್ದು, ಆರೋಪಿಯು ನನಗೆ ಸು.10-15 ವರ್ಷಗಳಿಂದ ಪರಿಚಯವಿರುತ್ತಾರೆ. ನಾನು ಕಡೂರಿನಲ್ಲಿ 10-15 ವರ್ಷ ವಾಸವಿರದೆ ಬಂದು -ಹೋಗಿ ಮಾಡುತ್ತೇನೆ. ನಾನು ಸಾಲ ನೀಡಿದ ದಿನದಂದೇ ಆರೋಪಿಯು 2 SBI ಬ್ಯಾಂಕಿನ ಚೆಕ್ ನೀಡಿರುತ್ತಾರೆ. ಸದರಿ 2 ಚೆಕ್‌ಗಳನ್ನು ಅವರೆ ಭರ್ತಿ ಮಾಡಿದ್ದರು. ಸದರಿ ಚೆಕ್ ಗಳ ಸಂಖ್ಯೆ ನನಗೆ ಗೊತ್ತಿಲ್ಲ, ಸಾಕ್ಷಿ ಮುಂದುವರೆದು ಅವುಗಳನ್ನು ವಾಪಾಸು ಪಡೆದುಕೊಂಡಿರುತ್ತಾರೆ ಎನ್ನುತ್ತಾರೆ. ಆರೋಪಿಯು ಸದರಿ ಖಾತೆಯಲ್ಲಿ ಹಣ ಇಲ್ಲ ಐಸಿಐಸಿಐ ಬ್ಯಾಂಕಿನಲ್ಲಿ ಹಣ ಇರುವುದಾಗಿ ಹೇಳಿ SBI ಚೆಕ್ ಪಡೆದು ICICI ಚೇಕ್ ನೀಡಿರುತ್ತಾರೆ. ದಿ:21.12.2023 ರಂದು ಸದರಿ 2 ಚೆಕ್ ವಾಪಾಸು ಪಡೆದು ICICI ಚೆಕ್ ನೀಡಿರುತ್ತಾರೆ. ಸದರಿ ಚೆಕ್ಗಳನ್ನು ಹಿಂದಿರುಗಿಸುವಾಗ ಬೇರೆ ಯಾರು ಇರಲಿಲ್ಲ. ಸದರಿ SBI ಚೆಕ್ ನೀಡಿದ್ದನ್ನು ಮತ್ತು ವಾಪಾಸು ಮಾಡಿದ್ದನ್ನು ಪ್ರಮಾಣ ಪತ್ರದಲ್ಲಿ ಹೇಳಿಲ್ಲವೆಂದರೆ ಸರಿ.

ರೂ.17 ಲಕ್ಷ ಆದಾಯವಿದೆ ಎಂದು ತೋರಿಸಲು ದಾಖಲೆ ಹಾಜರುಪಡಿಸಿಲ್ಲ. ರೂ.12 ಲಕ್ಷ ಉಳಿತಾಯವಾಗುತ್ತದೆ ಎಂದು ತೋರಿಸಲು ದಾಖಲಾತಿ ಇಲ್ಲ. ವಿವಾದಿತ ಚೆಕ್ ಅನ್ನು ಬೀರೂರಿನ ನಮ್ಮ ಮನೆಯಲ್ಲಿ ನೀಡಿರುತ್ತಾರೆ. ನಿಪಿ 1, 2 ರ ಒಕ್ಕಣೆಯನ್ನು ಆರೋಪಿ ಬರೆದುಕೊಂಡು ತಂದಿದ್ದರು. ವಿವಾದಿತ ಚೆಕ್ ಗಳನ್ನು ಬಾರ್-ರೆಸ್ಟೋರಂಟ್ ನಲ್ಲಿ ಮಳಿಗೆ ಬಾಡಿಗೆ ಪಡೆಯಲು ಉಮಾದೇವಿರವರಿಗೆ ಭದ್ರತೆಗಾಗಿ ಆರೋಪಿಯು ನೀಡಿದ್ದರು ಎಂದರೆ ಸರಿಯಲ್ಲ. ನಾನು ಉಮಾದೇವಿರವರ ವಿರುದ್ಧ ಹೂಡಿದ್ದ ಪ್ರಕರಣಕ್ಕೆ ಪ್ರತಿಯಾಗಿ ಸದರಿ ಉಮಾದೇವಿರವರು ವಿವಾದಿತ ಚೆಕ್ ಗಳನ್ನು ನನಗೆ ನೀಡಿದ್ದರು ಎಂದರೆ ಸರಿಯಲ್ಲ. ನನ್ನ ಮತ್ತು ಆರೋಪಿಯ ನಡುವೆ ಯಾವುದೇ ವ್ಯವಹಾರ ನಡೆಯದಿದ್ದರು ನಾನು ಮತ್ತು ಉಮಾದೇವಿ ಸೇರಿ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಉಮಾದೇವಿರವರ ವಿರುದ್ಧದ ಪ್ರಕರಣದ ಬಾಕಿ ಇದೆ.

ಆರೋಪಿಗೆ ರೂ.10 ಲಕ್ಷ ಸಾಲ ನೀಡುವ ಚೈತನ್ಯ ನನಗೆ ಇಲ್ಲ ಎಂದರೆ ಸರಿಯಲ್ಲ. ನನ್ನ ತಾಯಿಯ ಹೆಸರಿನಲ್ಲಿನ ಜಮೀನಿನ ದಾಖಲೆ ಹಾಜರುಪಡಿಸಲು ತೊಂದರೆ ಇಲ್ಲ.

ನನಗೆ 2 ಎಕರೆ ಜಮೀನು ಕೊಟ್ಟ ಬಗ್ಗೆ ದಾಖಲಾತಿ ಇಲ್ಲ, ಸಾಕ್ಷಿಯು ಮೌಖಿಕವಾಗಿ ಕೊಟ್ಟಿರುತ್ತಾರೆ ಎನ್ನುತ್ತಾರೆ. ನಾನಗಾಗಲೀ ನನ್ನ ತಾಯಿಗಾಗಲೀ ಯಾವುದೇ ಜಮೀನು ಇಲ್ಲದಿದ್ದರು ಪ್ರಕರಣಕ್ಕಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನೋಟೀಸ್ ಅನ್ನು ಆರೋಪಿಗೆ ನೀಡಿರುತ್ತೇನೆ. ನಿಪಿ 1, 2 ರಲ್ಲಿನ ಸಹಿಯು ಆರೋಪಿಯದ್ದು. ನಿಪಿ 8 ರ ಹಿಂಬರಹದಲ್ಲಿನ ಸಹಿಯು ಆರೋಪಿಯದ್ದೆ ಎಂದರೆ ಸಾಕ್ಷಿಯು ಅದನ್ನು ಅಂಚೆ ಇಲಾಖೆಯವರ ಬಳಿ ಕೇಳಬೇಕು ಎನ್ನುತ್ತಾರೆ. ನಿಪಿ 8 ರ ಸಹಿಗೂ ಹಾಗೂ ನಿಪಿ 1, 2 ರಲ್ಲಿನ ಸಹಿಗಳ ನಡುವೆ ವ್ಯತ್ಯಾಸವಿದೆ ಎಂದರೆ ಸರಿ. ಆರೋಪಿಗೆ ಕಳುಹಿಸಿದ ನೋಟೀಸು ಜಾರಿಯಾಗಿಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯದ ಸಮನ್ಸ್ ಜಾರಿಯಾದಾಗ ಪ್ರಕರಣದ ಮಾಹಿತಿ ಆರೋಪಿಗೆ ತಿಳಿದಿದೆ ಎಂದರೆ ಸರಿಯಲ್ಲ. ಅಂಚೆ ಇಲಾಖೆಯವರೊಂದಿಗೆ ಶಾಮೀಲಾಗಿ ನಿಪಿ 8 ನ್ನು ಸೃಷ್ಟಿಸಿದ್ದು ನೋಟೀಸು ಜಾರಿಯಾಗಿಲ್ಲ ಎಂದರೆ ಸರಿಯಲ್ಲ. ಉಮಾದೇವಿ ರವರ ಮೂಲಕ ಮಳಿಗೆ ಕೇಳಲು ಒಂದು ಬಾರಿ ಬೇಟಿ ಮಾಡಿದ್ದನ್ನು ಹೊರತು ಪಡಿಸಿ ನನ್ನ ಮತ್ತು ಆರೋಪಿ ನಡುವೆ ಯಾವುದೇ ಪರಿಚಯವಿಲ್ಲ ಎಂದರೆ ಸರಿಯಲ್ಲ. ಆರೋಪಿಯ ಪರಿಚಯವಿಲ್ಲದಿದ್ದರು ಮತ್ತು ಆನ್ ಲೈನ್ ನಲ್ಲಿ ಯಾವುದೇ ಹಣ ವರ್ಗಾವಣೆ ಮಾಡಿಲ್ಲದಿದ್ದರು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ 1, 2 ರಲ್ಲಿನ ಮೊತ್ತಕ್ಕು ಆರೋಪಿಗೂ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಉಮಾದೇವಿರವರಿಗೆ ನೀಡಿದ್ದ ಚೆಕ್ ಪಡೆದುಕೊಂಡು ಆರೋಪಿಯಿಂದ ಅಕ್ರಮ ಲಾಭ ಪಡೆಯಲು ಮತ್ತು ಸದರಿಯವರಿಗೆ ತೊಂದರೆ ಕೊಡಲು ಸದರಿ ಪ್ರಕರಣ ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಉಮಾದೇವಿರವರು ನನ್ನ ಸೋದರಮಾವನ ಮಗಳು.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಒ,

ಸಹಿ/-

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.